



(6ನೇ ಪುಟದಿಂದ)

ನಾವೇನೋ ಇಂತಿಂಥ ಜಾತಿಯ ಹಕ್ಕಿಗಳು ಬರುತ್ತವೆ ಎನ್ನುತ್ತೇವೆ. ಆದರೆ ಈ ಹಕ್ಕಿಗಳಿಗೆ ಜಾತಿ ಬೇಧವಿಲ್ಲ. ಎಲ್ಲರೂ ಒಂದೇ ಎಂಬ ಮನೋಭಾವನೆಯಿಂದ ಎಲ್ಲ ಪಕ್ಷಿಗಳೂ ನೀರಿಗೆ ಬರುತ್ತವೆ. ನೀರಿನಲ್ಲಿ ಆಡಿ, ಸ್ವಲ್ಪ ನೀರು ಕುಡಿದು, ದಣಿವಾದಾಗೆಲ್ಲ ಮರಳಿ ಬರುತ್ತವೆ. ಆದರೆ ಯಾವ ಪಕ್ಷಿಯೂ ನೀರನ್ನು ವ್ಯರ್ಥ ಮಾಡುವುದಿಲ್ಲ.

ಈ ಚಿಕ್ಕ ನೀರಿನ ತೊಟ್ಟಿಯಿಂದ ಸುಮಾರು 15 ಅಡಿ ದೂರದಲ್ಲಿ ಒಂದು ಚಿಕ್ಕ ಟೆಂಟ್ ಮರೆಯನ್ನು ಮಾಡಿ, ಅದರ ಒಳಗೆ ಕುಳಿತುಕೊಂಡು, ಪಕ್ಷಿಗಳಿಗೆ ನಾವಿರುವುದು ಗೊತ್ತಾಗದ ಹಾಗೆ ವೀಕ್ಷಿಸಿ, ಅದರ ಚಿತ್ರಗಳನ್ನು ತೆಗೆಯುವುದು ನಮಗಿಷ್ಟದ ಹವ್ಯಾಸ.

ಬಿಸಿಲ ಬೇಗೆ ಒಂದೇ ಸಮನೆ ಏರುತ್ತಿದೆ. ಹಲವಾರು ಹಕ್ಕಿಗಳು ನೀರಿನ ಸೆಲೆ ಹುಡುಕಿ ನಿಮ್ಮ ಮನೆಯತ್ತಲೂ ಬರಬಹುದು. ನೀವಾದರೋ ಜ್ಯೂಸ್, ಏಸಿ ಗಳೆಂಬ ರಕ್ಷಣೆಯಲ್ಲಿರಬಹುದು. ಮನೆಗಳನ್ನು ಕಟ್ಟುವ ಭರದಲ್ಲಿ ಮರಗಳನ್ನೂ ಕಡಿದುರುಳಿಸಿರಬಹುದು. ಈ ಪಕ್ಷಿಗಳಿಗೆ ಅದ್ಯಾವುದೂ ಗೊತ್ತಿಲ್ಲ. ನಿಮ್ಮ ಮನೆಯ ಸೂರಿನ ಮೇಲೆ, ಪ್ರತಿದಿನವೂ ಒಂದು ತಟ್ಟೆಯಲ್ಲಿ ಸ್ವಲ್ಪ ನೀರಿಡಿ, ಸಾಧ್ಯವಾದರೆ ತಿನ್ನಲು ಒಂದಿಷ್ಟು ಕಾಳು ಇಟ್ಟುಬಿಡಿ.

